# ನಾನು ನನ್ನಂತೆ

ಮರೆ ಮಾಡಿದರು ಮುಖ ಕೆಳಗೆ
ಅಂತರಂಗ ಕಾಣುವಂತಿದೆ.
ಎತ್ತೆತ್ತಲೊ ಸಾಗಿ ನಡೆಯಲೆ ಬೇಕಿದೆ
ನಿಲ್ಲುವಂತಿಲ್ಲ.
ಅಕ್ಕ ಪಕ್ಕ ನೆರಳಿಲ್ಲ ಹೆಜ್ಜೆಗಳ ಎಣಿಸುವಂತಿಲ್ಲ.
ಬಿಗಿದ ತುಟಿ ಬತ್ತಿದ ಕಂಗಳು
ಕುಳಿತಿದ್ದೇನೆ.
ಎರಡೂ ಮೊಣಕಾಲುಗಳ ಮೇಲೆ ಮುಖ ಹುದುಗಿಸಿ,
ನೋವೊ ನಲಿವೊ ಅರಿವಿಲ್ಲ ಬಯಲಲ್ಲಿ ಬೆತ್ತಲಾಗಿ ಬರಿದಾಗಿ.
ಕುಳಿತು ಕೊರಗಿದಷ್ಟು ನಲುಗಿ ನರಳಿದಂತೆಲ್ಲ
ಬಿಟ್ಟು ಬಿಡಲೇಬೇಕೆನ್ನು ತಲೆಬಗ್ಗಿಸಿ ಕುಳಿತದ್ದು,
ಹೊಗಳಿಕೆ ಹೀಗಳಿಕೆಗೆ ಸಂಕೇತಗಳಾಗಿ
ಸವೆದದ್ದು ಸಾಕಿನ್ನು
ಕುಳಿತರಾಗದು, ಏಳುತ್ತೇನೆ
ಎದ್ದು ಹೊರಟಾಗಲೆ ಹೋರಾಟ
ಹೋರಾಡಿ ಹಂಚುತ್ತೇನೆ ಅರಿವು
ಅರಿವಿನಲ್ಲಿದೆ ಬೆರಗು
ಬೆರಗಿನಲ್ಲಿದೆ ಬೆಳಗು.

**ಸುವರ್ಣ ಕಾಡನಕುಪ್ಪೆ**



# ದೂರ ಸರಿಸಿದರು!

ಅವಳದ್ದೇನೂ ತಪ್ಪಿರಲಿಲ್ಲ
ಮತ್ಸರದ ಮೂಟೆಗಳೆಲ್ಲ
ಮಸಲತ್ತಿನ ಈಟಿಯಿಂದ
ಬಲುದೂರ ಸರಿಸಿದರಲ್ಲ!

ಮಾಧವನಿಗೆ ಅರಿವಾಗಲಿಲ್ಲ
ಮಾಧವಿಯೂ ತಿಳಿಸಲಿಲ್ಲ
ಮೂಕವೇದನೆ ಹೆಚ್ಚಿತಲ್ಲ
ಕೊರಗಿ ಕೃಶಳಾದಳಲ್ಲ!

ಗುಲ್‌ಮೊಹರ್ ಮರದಡಿ
ಬಿಸಿಲೂ ಬೆಳದಿಂಗಳಾಗಿತ್ತು
ಶೀತಲ ಪ್ರೇಮಾಮೃತಧಾರೆ
ಮನಗಳಲ್ಲಿ ತುಂಬಿತುಳುಕಿತ್ತು.
ಎಷ್ಟಂತ ಕಾಯುವವಳೋ
ಮನದಿನಿಯ ಮಾಧವನಿಗಾಗಿ
ಕನಸಿನ ಲೋಕದಾಚೆಯಿಂದ
ಅವತರಿಸುವ ಪ್ರೇಮಮೂರ್ತಿಗಾಗಿ!

ಮಾಧವಿಯ ಬರುವಿಕೆಯ
ಹಾಲುಹಾದಿಯ ಹೆಜ್ಜೆಗಾಗಿ
ಮಾಧವನ ಪ್ರತೀಕ್ಷೆ
ಮಾಡುವಳೇ ಉಪೇಕ್ಷೆ?

ನೆರಳುಬೆಳಕಿನ ಚಿತ್ತಾರದ
ಒಲವಿನ ಚಪ್ಪರದಡಿಯಲ್ಲಿ
ಸಂಗಮಿಸಿಹ ಕವಿಜೋಡಿ
ಕಾವ್ಯಾರಾಮದ ದಿವ್ಯಮೋಡಿ!

**ಬೇದ್ರೆ ಮಂಜುನಾಥ**